
1930ರಷ್ಟು ಹಿಂದೆಯೇ ಜಾನ್ ಮೇನಾರ್ಡ್ ಕೀನ್ಸ್ ಹೇಳಿದ್ದ ಮಾತನ್ನು ಜೇಮ್ಸ್ ಸುಜ್‌ಮನ್ ತಮ್ಮ ಪುಸ್ತಕದಲ್ಲಿ ಉಲ್ಲೇಖಿಸುತ್ತಾರೆ. ಅವರ ಪ್ರಕಾರ ಆ ಸಮಯಕ್ಕಿದ್ದ ತಂತ್ರಜ್ಞಾನವನ್ನು ಅಳವಡಿಸಿಕೊಂಡರೆ ಮನುಷ್ಯನಿಗೆ ವಾರಕ್ಕೆ ಕೇವಲ 15 ಗಂಟೆಗಳ ಕಾಲದ ಕೆಲಸ ಮಾತ್ರ ಸಾಕು. ಮಿಕ್ಕ ಸಮಯದಲ್ಲಿ ವಿರಾಮಕಾಲದ ಸಂಗೀತ-ಸಾಹಿತ್ಯ-ಮನರಂಜನೆಗೆ ಮೀಸಲಿಡಬಹುದು. ಆದರೆ ಹಾಗಾಯಿತೇ? ಇಲ್ಲ. ಸಿಕ್ಕ ಸಮಯದಲ್ಲಿ ಇನ್ನಷ್ಟು ಹೆಚ್ಚು ಕೆಲಸ ಮಾಡಿ ನಮ್ಮ ಆರಾಮಕ್ಕೆ ಇನ್ನಷ್ಟು ಪರಿಕರಗಳನ್ನು ಹುಡುಕುವುದು, ಮತ್ತು ಎಲ್ಲವೂ ತಯಾರಾಗಿ (ಊಟವೂ ರೆಡಿ-ಟು-ಈಟ್ ಆಗಿ) ನಮ್ಮಲ್ಲಿ ಬರುವಂತೆ ತಂತ್ರಜ್ಞಾನದ ಆವಿಷ್ಕಾರ ಮಾಡುತ್ತಲೇ ಇದ್ದೇವೆ.

ಯಂತ್ರವನ್ನು ಉಪಯೋಗಿಸಿ ಉತ್ಪಾದನೆ ಮಾಡುವುದು ಮಾನವ ಶ್ರಮಕ್ಕೆ ವಿರುದ್ಧವಾದದ್ದಷ್ಟೇ ಅಲ್ಲ, ಅದು ಉದ್ಯೋಗಾವಕಾಶಗಳ ವಿರುದ್ಧವೂ ಕೆಲಸ ಮಾಡುತ್ತದೆ. ಈಚಿನ ದಿನಗಳಲ್ಲಿ ಸಂಪತ್ತಿನ ಧ್ರುವೀಕರಣವಾಗುತ್ತಿದೆ ಎನ್ನುವ ಮಾತು ಚರ್ಚೆಗೆ ಬರುತ್ತಿದೆ. ಹೀಗೆ ಆಗುತ್ತಿರುವುದರ ಕಥೆಯೇನು ಎಂದು ಆಲೋಚಿಸಿ ನೋಡೋಣ. ಯಂತ್ರವನ್ನು ಉಪಯೋಗಿಸಿ ಉತ್ಪಾದನೆ ಕೈಗೊಂಡಾಗ, ಹತ್ತು ಜನರ ಕೆಲಸವನ್ನು ಒಂದೇ ಯಂತ್ರ ಮಾಡುತ್ತದೆ. ಯಂತ್ರ ಚಲಾಯಿಸಲು ಹತ್ತಕ್ಕೆ ಬದಲು ಒಬ್ಬ ಸಾಕು. ಯಂತ್ರ ಬಿಡುವಿಲ್ಲದೇ, ಮಾತಿಲ್ಲದೇ, ಶೌಚಾಲಯದ ಬ್ರೇಕಿಲ್ಲದೇ, ಚಹಾ ಕುಡಿಯದೇ ಮೂರೂ ಶಿಫ್ಟುಗಳ ಕಾಲ ಕೆಲಸ ಮಾಡಬಹುದು. ಆದರೆ ಯಂತ್ರವನ್ನು ಸ್ಥಾಪಿಸಲು ಹೂಡಿಕೆ ಬೇಕು. ಹತ್ತು ಕೆಲಸಗಾರರ ಹಲವು ವರ್ಷಗಳ ಸಂಬಳದಷ್ಟು ಹೂಡಿಕೆ ಯಂತ್ರದ ಮೇಲೆ ಅದನ್ನು ಕೊಳ್ಳುವಾಗಲೇ ಹೂಡಬೇಕು. ಹೀಗಾಗಿಯೇ ಔದ್ಯೋಗಿಕ ಕ್ರಾಂತಿಯೊಂದಿಗೆ ಬೆಳೆದು ಬಂದದ್ದು ಬಂಡವಾಳ ಕೇಂದ್ರಿತ ವ್ಯಾಪಾರ ವ್ಯವಸ್ಥೆ. ಬಂಡವಾಳವಿದ್ದವರು ಯಂತ್ರಗಳನ್ನು ಚಲಾಯಿಸಿ, ಅದರಿಂದ ಆರ್ಜಿಸಿದ ಲಾಭವನ್ನು ತಾವು ಇಟ್ಟುಕೊಂಡರೆ, ಹತ್ತು ಉದ್ಯೋಗಿಗಳಲ್ಲಿ ಒಂಬತ್ತು ಜನ ನಿರುದ್ಯೋಗಿಗಳಾಗುತ್ತಿದ್ದರು, ಅಥವಾ ಸ್ವಂತ ಉತ್ಪಾದನೆಗೆ ಲಾಭದಾಯಕ ಮಾರುಕಟ್ಟೆಯಿಲ್ಲದೇ ಅವರು ಇನ್ನಷ್ಟು ಬಡವರಾಗುತ್ತಾರೆ. ಭಿನ್ನವಾಗಿ




ಈ ವ್ಯವಹಾರಗಳನ್ನು ನೋಡಿದಾಗ ಅದು ದಕ್ಷತೆ, ನವೋದ್ಯಮಕ್ಕೆ ಪ್ರೋತ್ಸಾಹ ಕೊಟ್ಟಂತೆ ಅನ್ನಿಸಿದರೂ ಅದರ ಮೂಲದಲ್ಲಿ ಅಸಮಾನತೆಯ ಅಂಶಗಳಿವೆ. ಅಸಮಾನತೆಯನ್ನು ಹುಟ್ಟುಹಾಕಿ ಮರುಹಂಚಿಕೆ ಮಾಡುವುದಕ್ಕಿಂತ, ಅಸಮಾನತೆಯ ಮೂಲಗಳು ಏನೆಂದು ಹುಡುಕಿ ಅದನ್ನು ನೈತಿಕವಾಗಿ ಎದುರಿಸಲು ಗಾಂಧಿ ಮತ್ತು ಕುಮಾರಪ್ಪ ಪ್ರಯತ್ನಿಸಿದರು. ಅದೇ ವಿಚಾರವನ್ನು ಸುಮನಸ್ ಸಮಕಾಲೀನ ವ್ಯವಸ್ಥೆಯಲ್ಲಿ ವಿಮರ್ಶೆಗೆ ಒಡ್ಡುತ್ತಾರೆ.

ಸ್ಥಳೀಯತೆಯನ್ನು ಸಮರ್ಥಿಸಿ ಹಿಂದೆಯೂ ಅರ್ಥಶಾಸ್ತ್ರಜ್ಞರು ವಿಸ್ತೃತವಾಗಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದರು. ಜರ್ಮನ್ ಮೂಲದ ಬ್ರಿಟಿಷ್ ಅರ್ಥಶಾಸ್ತ್ರಜ್ಞ ಇ.ಎಫ್. ಶೂಮಾಕರ್ ಬರೆದ 'ಸ್ಮಾಲ್ ಇಸ್ ಬ್ಯೂಟಿಫುಲ್' ಎನ್ನುವ ಪುಸ್ತಕದಲ್ಲಿ ಸ್ಥಳೀಯ ಅರ್ಥವ್ಯವಸ್ಥೆಯ ಬಗ್ಗೆ ಮಾತನಾಡಿದ್ದರು. ಆ ಪುಸ್ತಕದ ಉಪಶೀರ್ಷಿಕೆ 'ಎ ಸ್ಟಡಿ ಆಫ್ ಎಕನಾಮಿಕ್ಸ್ ಆ್ಯಸ್ ಇಫ್ ಪೀಪಲ್ ಮ್ಯಾಟರ್ಡ್' ಎನ್ನುವುದಾಗಿತ್ತು.